ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 1, March-April 2025, Pp. 25-29
Bi-Monthly, Peer-Reviewed, Open Access, Indexed Journal

**I S S N: 2583-3510**
**SIRDF JOURNALS**
editor@srujani.in
www.srujani.in

# ಕಾಯಕ ಯೋಗದ ಮಹಾನ್ ಸಂತ ದೇವರ ದಾಸಿಮಯ್ಯ

**ಡಾ. ಕೃಷ್ಣಪ್ಪ ಆರ್. ಮೆಳವಂಕಿ**
ಮುಖ್ಯಸ್ಥರು, ಕನ್ನಡ ವಿಭಾಗ, ಕಿ.ನಾ.ಎ.ವ. ಸಂಘದ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಕಿತ್ತೂರು

***Abstract:***
*ಕಾಯಕ ಯೋಗದ ದರ್ಶನವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ ಜನಸಾಮಾನ್ಯರ ನಮಡುವಿನ ಮೊದಲ ಮಹಾನ್ ಸಂತ ದೇವರ ದಾಸಿಮಯ್ಯ, ಕನ್ನಡದ ಆದ್ಯ ವಚನಕಾರರು. ಭಾರತದ ಸಾಂಸ್ಕೃತಿಕ ಮತ್ತು ಧಾರ್ಮಿಕ ಇತಿಹಾಸದ ಪ್ರಕಾಶಮಾನವಾದ ನಕ್ಷತ್ರ. ಕರ್ನಾಟಕದ ಚರಿತ್ರೆಯಲ್ಲಿ ಮಾದಾರ ಚನ್ನಯ್ಯನಂತೆ ದೇವರ ದಾಸಿಮಯ್ಯನೂ ಶಿವಶರಣ ಸಂಸ್ಕೃತಿಯ ಮೊಟ್ಟಮೊದಲ ರೂವಾರಿ ಗಾಢವಾಗಿ ಪ್ರಭಾವಿಸಿದ ವಚನವೆಂಬ ಉಕ್ತಿಕ್ರಮದ ಪ್ರವರ್ತಕ. ವಿಶ್ವದ ಇತಿಹಾಸದಲ್ಲಿಯೇ ಅಪರೂಪದ ಕಾಯಕ ಯೋಗದ ನೇತಾರ–ನೇಕಾರ. ಬಸವಾದಿ ಶರಣರ ಒಂದು ದಶಕ ಪೂರ್ವದಲ್ಲಿಯೇ ಅಂದರೆ 11ನೇ ಶತಮಾನದ ಪೂರ್ವ ಭಾಗದಲ್ಲಿ ಮಹಾನ ಶಿವಶರಣ ದಾಸೋಹ ಪ್ರೀಯ, ಅವತಾರಿ ಪುರುಷ, ಪವಾಡ ವ್ಯಕ್ತಿ ಈ ಜೇಡರ ದಾಸಿಮಯ್ಯ. ಅನೇಕ ಸಂಶೋಧಕರು ಇವನನ್ನು ದೇವರ ದಾಸಿಮಯ್ಯನೆಂದು ನಿರೂಪಿಸಿದ್ದಾರೆ.*

**Keywords:** *ಶಿವಶರಣ, ವಚನಕಾರರು, ಕಾಯಕ ಯೋಗ, ಸಂತ, ದೇವರ ದಾಸಿಮಯ್ಯ.*

**ಪೀಠಿಕೆ**

ಹನ್ನೆರಡನೇ ಶತಮಾನದ ಹಲವು ವಚನಕಾರರಿಂದ ದೇವರ ದಾಸಿಮಯ್ಯ ಕೀರ್ತಿತನಾಗಿದ್ದಾನೆ. ಸಕಲೇಶ ಮಾದರಸ ಸಿದ್ಧರಾಮರೂ ಇವನನ್ನು ಸ್ಮರಿಸಿದ್ದಾರೆ. 12ನೇ ಶತಮಾನದ ವಚನಕಾರರಲ್ಲಿ ಬಸವಣ್ಣನವರ ಸರಳ ಅರ್ಥ ಗರ್ಭಿತ ವಚನಗಳನ್ನು ಅಲ್ಲಮ ಪ್ರಭುವಿನ ಬೆಡಗಿನ ವಚನಗಳನ್ನು ಚನ್ನಬಸವಣ್ಣನವರ ದ್ವಂದ್ವಾರ್ಥ ಕೊಡುವ ಕೆಲ ವಚನಗಳನ್ನು ಈ ಎಲ್ಲ ಬಗೆಯ ವಚನಗಳ ಪರಿಯನ್ನು ದೇವರ ದಾಸಿಮಯ್ಯನವರ ವಚನಗಳಲ್ಲಿ ಕಾಣುತ್ತೇವೆ. ಈತ ಅವತಾರ ಪುರುಷ ವಿದ್ಯಾಧರನಿಂದ ದಾಸಿಮಯ್ಯನವರೆಗೆ ಇವನ ಏಳು ಅವತಾರಗಳು ಕಾಣಬರುತ್ತವೆ. ಇವರಿಗೆಲ್ಲ ದೇವಾಂಗದೇವಲ ಮಹರ್ಷಿ ಮೂಲ ಪುರುಷನಾಗಿದ್ದಾನೆ. ಇವರ ಏಳನೆಯ ಅವತಾರವೇ ದೇವರ ದಾಸಿಮಯ್ಯ. ರಾಮನಾಥ ಎಂಬ ಅಂಕಿತದೊಂದಿಗೆ ವಚನಗಳನ್ನು ರಚಿಸಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಚಿರಸ್ಮರಣೀಯನಾಗಿದ್ದಾನೆ. ನೇಯ್ಗೆಯ ಕಾಯಕದಿಂದ ಜೀವನ ನಡೆಸಿ ಆಧ್ಯಾತ್ಮಿಕ ಜೀವಿಯಾಗಿ ಲೋಕಾನುಭವಗಳನ್ನು ನಾಡಿನ ಆಡು ಭಾಷೆಯಲ್ಲಿ ಬರೆದು ವಚನ ಸಾಹಿತ್ಯದ ಉಗಮಕ್ಕೆ ನಾಂದಿ ಹಾಡಿದ್ದಾನೆ. ಡಾ.ಆರ್.ಸಿ.ಹಿರೆಮಠರು ಬರೆದು "ಸಿದ್ದರಾಮೇಶ್ವರ ವಚನಗಳು" ಗ್ರಂಥದಲ್ಲಿ "ಜೇಡರೆಲ್ಲರೂ ದಾಸಿಮಯ್ಯನಾಗಬಲ್ಲರೇ?" ಎಂಬುದು ದಾಸಿಮಯ್ಯನ ಘನ ವ್ಯಕ್ತಿತ್ವವನ್ನುನಿರೂಪಿಸುತ್ತದೆ.

**Please cite this article as:** ಕೃಷ್ಣಪ್ಪ ಆರ್. ಮೆಳವಂಕಿ. (2025). ಕಾಯಕ ಯೋಗದ ಮಹಾನ್ ಸಂತ ದೇವರ ದಾಸಿಮಯ್ಯ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(1), 25–29

ದಾಸಿಮಯ್ಯ ಈಗಿನ ಯಾದಗೀರ ಜಿಲ್ಲೆಯ ಸುರಾಪುರ ತಾಲೂಕಿನ ದಕ್ಷಿಣ ಕಾಶಿ ಎಂದು ಪ್ರಸಿದ್ದಿ ಪಡೆದ ಮುದನೂರು ಪುಣ್ಯಭೂಮಿಯಲ್ಲಿ ಜನಿಸಿದರು. ದೇವಾಂಗ (ಜೇಡ) ಕುಲದ ರಾಮಯ್ಯ ಮತ್ತು ಶಂಕರಮ್ಮ ದಂಪತಿಗಳ ಕರುಣೆಯ ಕೂಸಾಗಿದ್ದರು ಇವರ ಶಿಕ್ಷಣ ಶ್ರೀ ಶೈಲ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಚಂದ್ರಗುಂಡ ಶಿವಾಚಾರ್ಯರಿಂದ ಶಿವದೀಕ್ಷೆ ಪಡೆದು ಸರ್ವವಿದ್ಯಾಪಾರಂಗತರಾಗಿ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದಿಂದ ವೀರಶೈವ ಧರ್ಮದ ಪರಿಪಕ್ವ ಜ್ಞಾನವನ್ನು ಪಡೆದುಕೊಂಡು ವೀರಶೈವ ಧರ್ಮ ಪ್ರಚಾರ ಮಾಡುತ್ತಾ ಅನ್ಯ ಧರ್ಮಗಳನ್ನು ವಾದ ವಿವಾದಗಳಲ್ಲಿ ವೀರಶೈವ ಧರ್ಮದ ಕೀರ್ತಿಯನ್ನು ಕನ್ನಡ ನಾಡಿನಲ್ಲಿ ಅಷ್ಟೇ ಅಲ್ಲದೆ ಹೊರ ದೇಶಗಳಲ್ಲಿಯೂ ಬೆಳಗಿದ ಮಹಾ ಶಿವಶರಣ ಮೊಟ್ಟಲಕೇರಿಯ 11ನೇ ಜಯಸಿಂಹ ರಾಜನಿಗೂ ಅವನ ಹೆಂಡತಿ ಸುಗ್ಗಲೆಗೂ ಮತ್ತು ಅನೇಕ ಜೈನರಿಗೂ ಲಿಂಗದೀಕ್ಷೆ ಕೊಟ್ಟು ಶಿವಶರಣರನ್ನಾಗಿ ಮಾಡಿದನು. ಸಮಾಜದಲ್ಲಿ ಸ್ತ್ರೀ ಸಮಾನತೆಯ ತತ್ವಗಳನ್ನು ನಿರೂಪಿಸಿ ಅಹಂಕಾರಿಗಳ ಗರ್ವಭಂಗಮಾಡಿದನು. ಈ ರೀತಿ ಜನಸಾಮಾನ್ಯರಲ್ಲಿಯ ಅಂಕುಡೊಂಕುಗಳನ್ನು ಪ್ರವಚನ, ಪುಣ್ಯಕಥೆ, ಪುರಾಣ, ವಚನಗಳ ಮುಖಾಂತರ ತಿದ್ದಿದರು.

ಉತ್ತರ ಕರ್ನಾಟಕದ ಕೃಷ್ಣ ಭೀಮೆಯರ ನಡುವಿನ ವಿಸ್ತಾರವಾದ 'ಸಗರನಾಡು' ಈ ನಾಡಿನ ಯಾದಗಿರಿ ಜಿಲ್ಲೆಯ ಪಶ್ಚಿಮಕ್ಕೆ ಸುರಾಪುರ ತಾಲೂಕಿನ ಪಶ್ಚಿಮಕ್ಕೆ ಸುಮಾರು 30 ಕಿ.ಮೀ ದೂರದಲ್ಲಿ ಅವಿಮುಕ್ತ ಪುಣ್ಯಕ್ಷೇತ್ರ, 'ದಕ್ಷಿಣ ಕಾಶಿ', ಮುದನೂರ ದೇವರ ದಾಸಿಮಯ್ಯನ ಜನ್ಮಸ್ಥಳ. ಇದರ ಮೊದಲಿನ ಹೆಸರು 'ಮುದ್ರಾಪುರ' ಎಂದಿತ್ತು. ಅಂದಿನ ಕಾಲದಲ್ಲಿ ಅದು ಬಹುದೊಡ್ಡ ದಾರ್ಮಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಆಗುಹೋಗುಗಳ ನೆಲೆಯಾಗಿತ್ತು. ಈ ಪ್ರದೇಶದಲ್ಲಿ ನೀರಿನ ಬುಗ್ಗೆಗಳು ಅಧಿಕ ಸಂಖ್ಯೆಯಲ್ಲಿದ್ದ ಕಾರಣ 'ಮುದಿನೀರು' ಎಂದು ಹೆಸರುಗೊಂಡು ಮುಂದೆ ಮುದನೂರಾಗಿ ಬದಲಾದಂತಿದೆ. ಮುದಿನೀರು ಎಂದರೆ ದೊಡ್ಡ ಗಾತ್ರದ ನೀರಿನ ಅಕ್ಷಯ ಎಂದರ್ಥ. ಇಲ್ಲಿ ಹಿರೆಮುದನೂರು ಚಿಕ್ಕಮುದನೂರೆಂದು ಎರಡು ಅಕ್ಕಪಕ್ಕದ ಗ್ರಾಮಗಳು. ಇಲ್ಲಿಯ ಹಿರೆಮುದನೂರಿನಲ್ಲಿ ಅನೇಕ ದೇವಾಲಯಗಳ ಮಧ್ಯದಲ್ಲಿ ಶಿವನ ಆತ್ಮಲಿಂಗ ಪ್ರತಿಷ್ಠಾಪಿಸಿದಂತೆ ಮೂಲ ರಾಮನಾಥನ ದೇವಾಲಯವಿದೆ. ಆ ರಾಮನಾಥನೇ ದಾಸಿಮಯ್ಯನ ವಚನಗಳ ಅಂಕಿತವಾಗಿದ್ದಾನೆ.

ದಾಸಿಮಯ್ಯನ ಜೀವನದ ಮುಖ್ಯಭಾಗವೆಂದರೆ ಅವನ ವೈವಾಹಿಕ ಬದುಕು. ಆತನ ಭಕ್ತಿ ಹೆಣ್ಣನ್ನು ಮಾಯೆ ಎಂದು ಕರೆಯುವ ಗಂಡು ಭಕ್ತಿಯಲ್ಲ ಅಥವಾ ಗಂಡನನ್ನು ತೊರೆಯಿಸುವ ಹೆಣ್ಣು ಭಕ್ತಿಯು ಅಲ್ಲ. ಅದು ಸತಿಪತಿಗೊಂದಾದ ಭಕ್ತಿ. ಆತನ ಹೆಂಡತಿ ದುಗ್ಗಳೆ ಇಚ್ಛೆಯನರಿತ ಸತಿಯಾಗಿದ್ದಳು. ದಾಸಿಮಯ್ಯನ ಬಗ್ಗೆ ಆನಂತರದಲ್ಲಿ ರಚನೆಯಾದ ಪುರಾಣಗಳು ಆತನ ಖ್ಯಾತಿಯ ಪ್ರತೀಕಗಳಾಗಿವೆ. ದೇವಾಂಗ ಪುರಾಣ ಆತನನ್ನು ನೇಕಾರ ಋಷಿ, ದೇವಲ ಮಹರ್ಷಿಯ ಏಳನೇಯ ಗುರುವೆಂದು ಕೀರ್ತಿಸಿದೆ. ದಾಸಿಮಯ್ಯನ ಕುರಿತ ಪುರಾಣಗಳಲ್ಲಿ ಮೂರು ಘಟನೆಗಳಿಗೆ ವಿಶೇಷ ಒತ್ತು ಸಿಕ್ಕಿದೆ. ಒಂದನೇಯದು ಆತನ ಮದುವೆಯನ್ನು ಕುರಿತಾದದ್ದು, ತನಗೆ ತಕ್ಕ ಹೆಣ್ಣನ್ನು ಹುಡುಕುವಾಗ ದಾಸಿಮಯ್ಯ ಒಂದು ವಿಚಿತ್ರವಾದ ಪರೀಕ್ಷೆಯನ್ನು ಏರ್ಪಡಿಸುತ್ತಾನೆ. ಸೌದೆ ಮತ್ತು ನೀರನ್ನು ಬಳಸದೆ ಪಾಯಸ ಮಾಡುವಾಕೆಯನ್ನು ಮದುವೆಯಾಗುವುದಾಗಿ ಘೋಷಿಸುತ್ತಾನೆ. ಕನ್ಯಾನ್ವೇಷನೆ ಮಾಡುತ್ತ ಕೊನೆಗೆ ಶಿವಪುರ ಎಂಬ ಗ್ರಾಮಕ್ಕೆ ಬಂದನೆಂದು ಶ್ರೀ ಫ.ಗು. ಹಳಕಟ್ಟಿಯವರು ಹೇಳಿದರೆ ಕೆಲವು ಪಂಡಿತರು ಗುಲಬುರ್ಗ ಜಿಲ್ಲೆಯ 'ಗಬ್ಬೂರು' ಎಂದಿದ್ದಾರೆ. ಶಿವಪುರದಲ್ಲಿ ಮಲ್ಲಿನಾಥ ಮಹಾದೇವಿಯಂಬ ಶಿವಶರಣ ದಂಪತಿಗಳ ಸರ್ವಗುಣ ಸಂಪನ್ನಳಾದ ಮತ್ತು ಅನುರೂಪಳಾದ

ದುಗ್ಗಳೆ ಎಂಬ ಮಗಳಿದ್ದಳು. ದಾಸಿಮಯ್ಯನು ಒಡ್ಡಿದ ಪರೀಕ್ಷೆಯನ್ನು ಗೆದ್ದು ಅವನ ಕೈ ಹಿಡಿದಳು. ಯಥಾ ಪ್ರಕಾರ ದಾಸಿಮಯ್ಯ ತನ್ನ ಮನೆತನದ ಕಾಯಕವಾದ ವಸ್ತ್ರ ನೇಯ್ಗೆಯ ಕಾಯಕದಲ್ಲಿ ನಿರತನಾದನು. ಈ ಶರಣದಂಪತಿಗಳು ಗೃಹಸ್ಥ ಜೀವನದಲ್ಲಿದ್ದರೂ ಭಕ್ತಿ ಪಥದ ಪಾರಮಾರ್ಥಿಕ ಜೀವನ ನಡೆಸುತ್ತಿದ್ದರು.

ಎರಡನೇಯದು ತವನಿಧಿಯನ್ನು ಕುರಿತದ್ದು ಅತ್ಯದ್ಭುತವಾಗಿ ತಾನು ನೇಯ್ದ ಬಟ್ಟೆಯನ್ನು ಸಂತೆಗೆ ಮಾರಲು ಹೋದಾಗ ಚಳಿಯಲ್ಲಿ ನಡುಗುವ ಒಬ್ಬ ಜಂಗಮನಿಗೆ ಬಟ್ಟೆಯನ್ನು ಹೊದಿಸಲಾಗಿ ಅವನು ಅದನ್ನು ಹರಿದು ಹಾಕಿದನು. ಆದರೂ ದಾಸಿಮಯ್ಯನು ಸಿಟ್ಟಾಗದೆ ಮನೆಗೆ ಅವನನ್ನೂ ಕರೆದೊಯ್ದು ಉಣಬಡಿಸಿದಾಗ ಆ ಜಂಗಮನು ಸಂತೋಷದಿಂದ ದಾಸಿಮಯ್ಯನಿಗೆ ತವನಿಧಿಯನ್ನು ನೀಡುತ್ತಾನೆ.

ಮೂರನೇಯದು ರಾಣಿ ಸುಗ್ಗಳೆಯ ಮತಾಂತರಕ್ಕೆ ಸಂಬಂಧಿಸಿದ್ದು, ಜೈನಳಾದ ರಾಣಿ ಸುಗ್ಗಳೆಯನ್ನು ವೀರಶೈವ ಧರ್ಮಕ್ಕೆ ತಿರುಗಿಸಿದ್ದು.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ದೇವರ ದಾಸಿಮಯ್ಯ ವಚನ ಪರಂಪರೆಗೆ ತಳಹದಿಯನ್ನು ನಿರ್ಮಿಸಿದ್ದು ಸರ್ವಸಮ್ಮತವಾದುದು. ಮಾರ್ಕ್ಸ್‌ವಾದಿ ವಿದ್ವಾಂಸ ಮ್ಯಾನೆಜರ್ ಪಾಂಡೆ ಅವರ ಪ್ರಕಾರ ಆಧುನಿಕ ಪೂರ್ವ ಭಾರತದ ಏಕಮಾತ್ರ ರಾಷ್ಟ್ರವ್ಯಾಪಿ ಸಾಮಾಜಿಕ ಆಂದೋಲನವೆಂದರೆ ಭಕ್ತಿ ಚಳುವಳಿ. ಅದು ಪ್ರಾರಂಭವಾದದ್ದು ತಮಿಳುನಾಡಿನಲ್ಲಿ ಆರನೇ ಶತಮಾನದ ಸುಮಾರು. ಮುಂದೆ ದೇಶದ ನಾನಾಭಾಗಗಳಲ್ಲಿ ಹರಡಿ ಹೊಸ ಭಾಷೆ ಸಾಹಿತ್ಯಗಳನ್ನು ಉದ್ಘಾಟಿಸಿ ಕಲೆಗಳನ್ನು ನವೀಕರಿಸಿ ಜನಮುಖಿಯಾಗಿಸಿತು. ಈ ನೆಲದ ಶಾಪವಾದ ಜಾತಿ ಕುಲಗಳ ಕಟ್ಟನ್ನು ಸಡಿಲಗೊಳಿಸಿ ಕೆಳವರ್ಗಗಳನ್ನು ಸಬಲಗೊಳಿಸಿತು. ಗಂಡಾಳಿಕೆಯನ್ನು ಅಲ್ಲಾಡಿಸಿ ಹೆಂಗಸರ ಆತ್ಮ ವಿಶ್ವಾಸವನ್ನು ಹೆಚ್ಚಿಸಿತು. ಸಮುದಾಯಗಳಲ್ಲಿದ್ದ ಕಂದಾಚಾರಗಳನ್ನು ಕಂಡಿಸಿ ಸರ್ವರಿಗೂ ಎಟುಕುವ ಸರಳಮಾರ್ಗವನ್ನು ಜನಪ್ರೀಯಗೊಳಿಸಿತು. ಹೀಗೆ ನಾನಾಭಾಗಗಳಲ್ಲಿ ನಾನಾವಿಧದ ವಿಮೋಚನೆ ತಂದ ಭಕ್ತಿ ಮಾರ್ಗದಲ್ಲಿ ಸಗುಣ ಭಕ್ತಿ ಮತ್ತು ನಿರ್ಗುಣ ಭಕ್ತಿ ಎಂದು ಎರಡು ಪ್ರಕಾರಗಳು. ಸಗುಣ ಭಕ್ತಿ ದೇವರಿಗೆ ನಾಮರೂಪಗಳನ್ನು ಕೊಟ್ಟು ಇಂದ್ರೀಯ ಗ್ರಾಹ್ಯ ಮೂರ್ತಿ ರೂಪದಲ್ಲಿ ಭಕ್ತಿಯನ್ನು ಅನುಸಂಧಾನ ಮಾಡುತ್ತದೆ. ತಮಿಳುನಾಡಿನ ಶೈವ ಹಾಗೂ ವೈಷ್ಣವ ಭಕ್ತಿ ಪಂಥಗಳು ಈ ಬಗೆಯವು. ಹೀಗೆ ಹನ್ನೊಂದು–ಹನ್ನೆರಡೆನೇ ಶತಮಾನದಲ್ಲಿ ಕರ್ನಾಟಕ ನಿರ್ಗುಣ ಭಕ್ತಿಯ ಜನ್ಮಸ್ಥಾನವಾಯಿತು. ಹನ್ನೆರಡನೆ ಶತಮಾನದಲ್ಲಿ ವಚನಕಾರರು ಬಹುತೇಕ ಕಸಬುದಾರರು, ಕಾಯಕ ಜೀವಿಗಳು. ನೇಕಾರರಾಗಲಿ, ಚಮ್ಮಾರರಾಗಲಿ, ಅಂಬಿಗರಾಗಲಿ ಆಟದವರಾಗಲಿ, ಆಯ್ದಕ್ಕಿಯವರಾಗಲಿ ಅವರು ತಮ್ಮ ಕಸಬನ್ನು ಕೀಳೆಂದು ಬಗೆಯದೆ ಸಾಧನೆಯ ಮಟ್ಟಕ್ಕೇರಿಸಿದ್ದರು.

ಈ ದೃಷ್ಟಿಯಲ್ಲಿ ದಾಸಿಮಯ್ಯನಿಗೆ ಭಾರತದ ಇತಿಹಾಸದಲ್ಲೂ ದೊಡ್ಡ ಸ್ಥಾನವಿದೆ. ಆತ ಕಾಯಕ ಯೋಗದ ದರ್ಶನವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾನೆ. ಜನಸಾಮಾನ್ಯರ ನಡುವಿನ ಮೊದಲ ಮಹಾನ ಸಂತರಲ್ಲಿ ಪ್ರಮುಖನಾಗಿದ್ದಾನೆ ಅಲ್ಲದೆ ನಿರ್ಗುಣ ಭಕ್ತಿಯ ಮೊದಲ ನಿರ್ಮಾತೃಗಳಲ್ಲಿ ಪ್ರಮುಖನಾಗಿ ಉತ್ತರದ ಕಬೀರ ಹಾಗೂ ಸಿಖ್ ಪಂಥಗಳ ಪೂರ್ವ ಸೂಚನೆಯಾಗಿದ್ದಾನೆ ಆತನಿಗೆ ಅರಸರ ಹಂಗಿಲ್ಲ ಅರಸರು ನೀಡುವ ಸಿರಿಗಿಂತ ಶರಣರ ನುಡಿಯೆ ಮಿಗಿಲೆನ್ನುತ್ತಾನೆ.

***"ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ***
***ಸುಳಿದು ಬೀಸುವ ಗಾಳಿ ನಿಮ್ಮ ದಾನ***
***ನಿಮ್ಮ ದಾನವನ್ನುಂಡು ಅನ್ಯರ ಹೊಗಳುವ***
***ಕುನ್ನಿಗಳನೇನೆಂಬೆ ರಾಮನಾಥ"***

ಇಳೆ, ಬೆಳೆ, ಜಲಗಳು ಶಿವನ ನಿರ್ಮಿತಿಗಳು ಎಂಬುದನ್ನು ಮರೆತು ಅರಸರನ್ನು ಹೊಗಳಿ ಹಾಡುವ ಕವಿಗಳನ್ನು ಕುನ್ನಿಗಳೆಂದು ಜರಿಯುತ್ತಾನೆ. ಆ ಮೂಲಕ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ನಾಂದಿ ಹಾಡಿದ್ದಾನೆ. ದಾಸಿಮಯ್ಯನಂಥವನಿಗೆ 'ಹೆಣ್ಣು'–

ಮಣ್ಣುಗಳು ಮಾಯೆಯಲ್ಲ. ಪೃಥ್ವಿ ಸೋಜಿಗಗಳ ಆಗರ. ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ. ಅಂಬರಕ್ಕೆ ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ. ಹೀಗೆಂದು ಜಗತ್ತಿನ ಬೆರಗನ್ನು ಕೊಂಡಾಡುತ್ತಾನೆ. ಒಡಲು ಮಾಯೆಯಲ್ಲ ಅವ ಆಧ್ಯಾತ್ಮ ಹೇಡಿಯ ದಾರಿಯಲ್ಲ. ಅದು ಭೌತಿಕ ಸತ್ಯಗಳ ಗಟ್ಟಿ ಬುನಾದಿಯ ಮೇಲೆ ನಿಂತ ನಂಬುಗೆ. ಒಡಲುಗೊಂಡು ಆಮೇಲೆ ಮಾತಾಡು ಎಂದು ಶಿವನಿಗೆ ಸವಾಲು ಹಾಕುತ್ತಾನೆ. ಹಸಿವನ್ನು ನೀಗಿಸುವವನೇ ಅವನ ಪ್ರಪಂಚದಲ್ಲಿ ನಿಜವಾದ ಗಾರುಡಿಗ. ದಾಸಿಮಯ್ಯನ ಮಾರ್ಗದಲ್ಲಿ ಹೆಣ್ಣು ಮಕ್ಕಳಿಗೆ ವಿಶೇಷ ಸ್ಥಾನ. ಭಕ್ತಿಯಲ್ಲಿ ಸತಿ–ಪತಿಗಳಿಬ್ಬರೂ ಒಂದಾಗದೇ ಹೋದಲ್ಲಿ ಅಮೃತದಲ್ಲಿ ವಿಷ ಬೆರೆಸಿದಂತೆ ಅನ್ನುತ್ತಾನೆ.

*"ಗಂಡ ಭಕ್ತನಾಗಿ ಹೆಂಡತಿ ಭವಿಯಾದಡೆ*
*ಉಂಡ ಊಟ ಇಬ್ಬರಿಗೂ ಸರಿ ಭಾಗ*
*ಸತ್ತ ನಾಯ ತಂದು ಅಟ್ಟದ ಮೇಲೆ ಇಳುಹಿ*
*ಒಬ್ಬರೊಪ್ಪಚ್ಚಿ ಹಂಚಿಕೊಂಡು ತಿಂಬಂತೆ ಕಾಣಾ ರಾಮನಾಥಾ"*

ದಾಸಿಮಯ್ಯನ ಸಮಾನತೆಯ ದರ್ಶನ ವಿಶಿಷ್ಟವಾದುದು ಅದರ ಮೂಲ ಎಲ್ಲೆಲ್ಲಿಯೂ ಶಿವನನ್ನು ಕಂಡು ಕಾಣಿಸುವ ಅನುಭಾವದಲ್ಲಿದೆ. ಮಣಿ, ಗಣ ಸೂತ್ರದಂತೆ ತ್ರಿನಯನನೇ ಸರ್ವವ್ಯಾಪಿಯಾಗಿರುವಾಗ ಗಂಡಾಳಿಕೆಯ ಗರ್ವಕ್ಕಾಗಲೀ ಜಾತಿ ಪ್ರತಿಷ್ಠೆಗಾಗಲೀ ಎಡೆಯಿಲ್ಲ.

*"ಮಡದಿಯ ಪ್ರಾಣಕ್ಕೆ ಮೊಲೆಮುಡಿ ಇದ್ದಿತ್ತೇ?*
*ಒಡೆಯರ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ*
*ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಹಿಡಿಗೋಲ*
*ನೀನಿಕ್ಕಿದ ತೊಡಕ ನೀ ಲೋಕದ*
*ಜಡರೆತ್ತ ಬಲ್ಲರೈ ರಾಮನಾಥಾ"*

ಎಲ್ಲ ಸಮಯಗಳಲ್ಲೂ ಶಿವನಿರುವನಾಗಿ ಅಮವಾಸ್ಯೆ, ಪೌರ್ಣಮಿಗಳನ್ನಾದರಿಸಿದ ಜ್ಯೋತಿಷ್ಯದ ಲೆಕ್ಕಾಚಾರವೂ ಅನಗತ್ಯ. ಈ ಸರ್ವವ್ಯಾಪಿ ಶಿವನನ್ನು ಕಂಡುಕೊಳ್ಳುವ ಮಾರ್ಗ ದಾಸಿಮಯ್ಯನ ಏಕನಿಷ್ಠೆಯ ಭಕ್ತಿ ಹತ್ತು ದಿಕ್ಕಿಗೆ ಹರಿಯುತ್ತಾ ದಿಕ್ಕು ತಪ್ಪಿಸುವ ಚಿತ್ತ ವೃತಿಯ ರೋಗಕ್ಕೆ ಅದು ಮದ್ದು. ಈ ಅನುಭಾವ ಭಕ್ತಿಯ ಸಾಧನ ತಾನು ಮಾಡುವ ಕಾಯಕವಾಗಿದೆ.

*"ಉಂಕಿಯ ನಿಗುಚಿ, ಸರಿಗೆಯ ಸಮಗೊಳಿಸಿ*
*ಸಮಗಾಲನಿಕ್ಕಿ ಅಣಿಯೊಳು ಏಳ ಮೆಟ್ಟಿದೆ*
*ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು*
*ಈ ಸೀರೆಯ ನೆಯ್ದವ ನಾನೋ ನೀನೋ ರಾಮನಾಥಾ"*

ಈ ದರ್ಶನದಲ್ಲಿ ನರನೂ ಹರನೂ ಸಹ ಸೃಷ್ಟಿಕರ್ತರು ಈ ಕಾಯಕ ಮೂಲವಾದ ಅದ್ವೈತ ವೇದಾಂತಿಗಳ ತಾಂತ್ರಿಕರ ಮತ್ತು ಕಾಯಕ ಜೀವಿಗಳಲ್ಲದ ಇತರ ಭಕ್ತರ ಅದ್ವೈತಕ್ಕಿಂತ ತುಂಬಾ ಭಿನ್ನ. ದಾಸಿಮಯ್ಯ ಕಾಯಕ ಜೀವಿ ಶರಣರ ದರ್ಶನದ ಕಾಳನ್ನು ಕಂದಾಚಾರಿ ಧಾರ್ಮಿಕ ಪರಂಪರೆಗಳ ಡಾಂಭಿಕ ದರ್ಶನಗಳಿಂದ ಬೇರ್ಪಡಿಸಿ ನೋಡಬೇಕು. ಇಂದು ನಾವು ಮೂಲಭೂತವಾದ ಮತ್ತು ವಿಚ್ಛಿದ್ರೀಕರಣಗಳ ನಡುವೆ ಅನಿಶ್ಚಿತತೆಯಕೊಂಡ ಆಯುತ್ತಿದ್ದೇವೆ. ಈ ಸುತ್ತು ನೆಲೆಯಲ್ಲಿ ದಾಸಿಮಯ್ಯನ ಕಾಯಕಯೋಗ ದರ್ಶನಕ್ಕೆ ವಿಶೇಷ ಮಹತ್ವವಿದೆ. ಯಾಕೆಂದರೆ ಅವನ ದರ್ಶನ ಶೋಷಣವಾದಿ, ಏರ್ಪಾಡುಗಳಿಗೆ, ಅವುಗಳನ್ನು ಪೋಷಿಸುವ ಧರ್ಮಗಳಿಗೆ ಹೊರತು ಸಮಸ್ತ ಸೃಷ್ಟಿಯನ್ನು ಕಸದ ಬುಟ್ಟಿಯಾಗಿಸುತ್ತಿರುವ, ಸರ್ವ ಜೀವ ಜಡಗಳನ್ನು ಸ್ವಂತ ಲಾಭದ ಗುಲಾಮರಾಗಿಸುತ್ತಿರುವ ಭೌತಿಕ ವಾದಗಳಿಗೂ ಹೊರತು ಅಂದಂದಿನ ದಂದುಗಗಳ ನಡುವೆಯು ನಿಶ್ಚಿಂತನಾಗಿ, ಸ್ವಾವಲಂಬಿಯಾಗಿ, ಸರ್ವ ಜೀವ ಹಿತಂಕರವಾಗಿ ಈ ಲೋಕವನ್ನು ಮಾರ್ಪಡಿಸುವ ಮಾಂತ್ರಿಕ ಶಕ್ತಿ ದಾಸಿಮಯ್ಯನ ದರ್ಶನದಲ್ಲಿದೆ.

ದೇವರ ದಾಸಿಮಯ್ಯನು ತನ್ನ ದಾಂಪತ್ಯ ಜೀವನದೊಂದಿಗೆ ಸಮಾಜದ ಆಗು–ಹೋಗುಗಳನ್ನು ಅನೇಕ ದೇಶ ನಾಡುಗಳನ್ನು ಸುತ್ತಿ ಜನತೆಯನ್ನು ಸಂಪರ್ಕಿಸಿ ತನಗಾದ ಅಂತರಾಳದ ಅನುಭವವನ್ನು

ಸ್ವತಃ ಅನುಭವಿಸಿ, ಆಚರಿಸಿ ವಿಚಾರಿಸಿ ನಡೆದು ನುಡಿದು ಸತ್ಯಾನ್ವೇಷನೆಯ ಮಾರ್ಗವನ್ನು ಕಂಡುಕೊಂಡು ಜನತೆಗೆ ಸಮಾಜಕ್ಕೆ ತನ್ನ ಆಡು ಭಾಷೆಯಲ್ಲಿ ಎಲ್ಲರಿಗೂ ತಿಳಿಯುವಂತೆ ವಚನಗಳ ಮುಖಾಂತರ ಭೋಧಿಸಿದನು.

**ಪರಾಮರ್ಶನ ಗ್ರಂಥಗಳು**


- ನಾವಲಗಿ ಸಿ.ಕೆ. (2005). *ವಚನಕಾರ ಜೇಡರ ದಾಸಿಮಯ್ಯ*. ಬಸವ ಸಮಿತಿ.
- ರಾಚಯ್ಯ, ಆರ್. *ಜೇಡರ ದಾಸಿಮಯ್ಯನ ವಚನಗಳು.*
- ಹಳಕಟ್ಟಿ, ಫ.ಗು. *ದೇವ ದಾಸಯ್ಯ*
- ಹಿರೇಮಠ, ಆರ್. ಸಿ. *ಬಸವಣ್ಣನವರ ವಚನಗಳು*
- ಕಾಡದೇವರಮಠ, ಕೆ.ಎಂ. *ಮುದನೂರಿನ ಶ್ರೀ ದೇವರ ದಾಸಿಮಯ್ಯನವರು.*